doc-423
T.P-2

(1)

R No KRNN 12 ಶ್ರೀ 25-12-1974

in ★★★★★ 58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ವಾಮಿಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾಪನಾಧುರೀಣ ಎಂ. ಎಸ್. ಕೃಷ್ಣರಾವ್ (3 ಪೈಸೆ

ಹೊಟೇಲುಗಳಲ್ಲಿ ತಿಂಡಿ ಬೆಲೆಗಳ ಇಳಿತಾಯ

ಚಲಚ್ಚಿತ್ರೋತ್ಸವ

ನವದೆಹಲಿ– ತಾ || ಪ್ರಾರಂಭವಾಗಲಿರುವ ಅಂತರರಾಷ್ಟ್ರೀಯ ಚಲಚ್ಚಿತ್ರೋತ್ಸವದಲ್ಲಿ ಭಾಗವಹಿಸಲು 46 ದೇಶಗಳಿಂದ 100 ಪ್ರತಿನಿಧಿಗಳು ಬಂದಿರುವರೆಂದು ತಿಳಿಸಲಾಗಿದೆ.

★

ಪ್ರಯತ್ನ

ಹಿಸಾರ್— ಎಲ್ಲಾ ವಿರೋಧ ಪಕ್ಷಗಳ ಸಂಯುಕ್ತ ಗುಂಪನ್ನು ನಾಡಲು ತಮ್ಮ ಪಕ್ಷ ಪ್ರಯತ್ನಿಸುತ್ತಿರುವುದೆಂದು ಜನಸಂಘ ನಾಯಕ ಶ್ರೀ ವಾಜಪೇಯಿಯವರು ಪತ್ರಿಕೆಯವರಿಗೆ ತಿಳಿಸಿದರು.

★

ವಿಶ್ವ ಟೇಬಲ್ ಟೆನಿಸ್ ಪಂಥ

ಇಂಡೋಕ – ಮೆಲ್ಬೋರ್ನಿನಲ್ಲಿ ನಡೆಯುವ ಕಾರ್ನೆವೆಲ್ ಟೇಬಲ್ ಟೆನೀಸ್ ಪಂಥದಲ್ಲಿ ಭಾಗವಹಿಸಲು ಭಾರತದ 8 ಮಂದಿಯ ತಂಡ ಹೋಗಲಿದೆ – ನಂತರ ವಿಶ್ವ ಟೇಬಲ್ ಟೆನೀಸ್ ಪಂಥವು ಕಲ್ಕತ್ತಾದಲ್ಲಿ ಫೆಬ್ರವರಿ 6 ರಿಂದ 11 ರವರೆಗೆ ನಡೆಯಲಿದೆ – ಇದನ್ನು ವೀಕ್ಷಿಸಲು 12000 ಪ್ರೇಕ್ಷಕರಿಗೆ ಸ್ಥಾನ ಒದಗಿಸಲಾಗಿದೆ – 56 ರಾಷ್ಟ್ರಗಳು ಈ ಪಂಥಕ್ಕೆ ಪ್ರವೇಶಿಸಿವೆ ; ಚೀನಾ ಜರ್ಮನಿ ಸೇರಿ ಇನ್ನೂ 9 ದೇಶಗಳು ಸೇರಲಿವೆ – 200 ಕ್ಕೂ ಹೆಚ್ಚು ಚಾತ್ರೀದಾರರು ಬರಲಿದ್ದಾರೆ – ಆಟ ಪ್ರೇಮಿಗಳು ಬಹುಮಂದಿ ಹೊರಗಿನಿಂದ ನೋಡಲು ಬರುವರಿದ್ದಾರೆ

★

ಕ್ರಿಸ್‌ಮಸ್ ಶುಭಾಶಯಗಳು

ವೆಟಿಕಾನ್— 77 ವರ್ಷದ ಪೋಪ್ ಪಾಲ್‌ರವರು ತಮ್ಮ ಕ್ರಿಸ್ಮಸ್ ಶುಭಾಶಯಗಳಲ್ಲಿ, ಜನರು ಅತ್ಯಾವಶ್ಯಕವಿರುವ ಯಾರಿಗಾದರೂ ಸಹಾಯ ನೀಡುವುದು ಕ್ರಿಸ್ ಆಚರಣೆಗೆ ತಕ್ಕುದಾಗಿದೆ ಎಂದು ತಿಳಿಸಿರುವರು.

ಪತ್ರಿಕೆಗಳ ಬಗ್ಗೆ ಟೀಕೆ

ತುಮಕೂರು— ದೇಶದ ಪತ್ರಿಕೆಗಳು ಶ್ರೀಮಂತತ, ಪ್ರತಿಗಾಮಿಗಳ, ಏಕಸ್ವಾಮ್ಯವಾದಿಗಳ ಹಿಡಿತದಲ್ಲಿದೆಯೆಂದೂ, ಅವು ಕಾಂಗ್ರೆಸ್ ವಿರುದ್ಧವಾಗಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲವೆಂದು ಬರೆದಿವೆ ಎಂದು ಕಾಂಗ್ರೆಸ್ ಯುವಕ ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಮಾಡಿದ ಭಾಷಣದಲ್ಲಿ ಹೇಳಿದರು.

★

★ ಬೆಂಗಳೂರು— ತಾ ಲ್ಲೂಕು ಬೋರ್ಡ್‌ಗಳ ಚುನಾವಣೆಯನ್ನು ನೇತಿಂಗಳಲ್ಲಿ ನಡೆಸಲು ನಿರ್ಧರಿಸಲಾಗಿದೆಯೆಂದು ಗೊತ್ತಾಗಿದೆ.

★

ಕಳವಾಗಿದ್ದ ವಿಗ್ರಹಗಳು

ಲಕ್ನೊ— ಚಮೋಲಿ ಜಿಲ್ಲೆಯಲ್ಲಿ ಶ್ರೀ ರಘುನಾಥ ದೇವಾಲಯದಲ್ಲಿ ಕಳವಾಗಿದ್ದ 4 ಅಷ್ಟಲೋಹ ವಿಗ್ರಹಗಳು ಮತ್ತು ಪುರಾತನ 8 ವರ್ಣಚಿತ್ರಗಳು ಸಿಕ್ಕಿದವು

★

ತಿಂಡಿ ಬೆಲೆ ಇಳಿತಾಯ

ಶಿವಮೊಗ್ಗ– ಹೋಟಲಿನವರು ತಾ|| 21 ರಿಂದ ಕಾಫಿ, ದೋಸೆ, ಇಡ್ಲಿ ಮುಂತಾದುವುಗಳ ಬೆಲೆಯನ್ನು 5 ಪೈಸೆ ತಗ್ಗಿಸಲು ಸಮ್ಮತಿಸಿದರು.

○

ಸಹಸ್ರ ಗಣಪತಿ ಹೋಮ

ಮೈಸೂರಿನ ಶ್ರೀ ಸಚ್ಚಿದಾನಂದ ಗಣಪತಿ ಸ್ವಾಮಿಗಳವರು, ಕೋಲಾರ ಜಿಲ್ಲಾ ಕುರುಡುಮಲ್ಲೇನಲ್ಲಿನ ಶ್ರೀ ಮಹಾಗಣಪತಿ ದೇವಾಲಯದಲ್ಲಿ ತಾ|| 18 ರಂದು ಸಹಸ್ರ ಗಣಪತಿ ಹೋಮವನ್ನು ವೈಭವವಾಗಿ ನೆರವೇರಿಸಿದರೆಂದೂ ಗೊತ್ತಾಗಿದೆ.

ಹಣವಿಲ್ಲದ ಕಾಂಗ್ರೆಸ್ ಕಛೇರಿ

ಅಗರ್ತಲ— ತ್ರಿಪುರ ಪ್ರದೇಶ ಕಾಂಗ್ರೆಸ್‌ನಲ್ಲಿ ಹಣದ ಕೊರತೆ – ಪದಸ್ಯರ ಸಂಖ್ಯೆ ರಿಜಿಸ್ಟರಿನಲ್ಲಿ ತುಂಬಿದ್ದರೂ, ಶಾಸಕರು ಬಿಟ್ಟು ಯಾರೂ ಹಣ ಸಾವತಿ ಮಾಡುತ್ತಿಲ್ಲವಂತೆ –ಟೆಲಿಫೋನು ಚಾರ್ಜು ಬಾಕಿ ಟೆಲಿಫೋನು ಸಂಪರ್ಕ ಕತ್ತರಿಸಲಾಗಿದೆ – ಪೀಠೋಪಕರಣಗಳು ಇಲ್ಲವಾಗಿದೆ – ಅಲ್ಲಿಯ ವ್ಯವಸ್ಥಾಪಕರಾಗಿ ನೇಮಿಸಲ್ಪಟ್ಟಿರುವ ಶ್ರೀ ಮಾನ್ನೂರು ಆಲಿಯವರಿಗೆ ಸಹಾಯಕರಿಲ್ಲ, ಟೈಪುರೈಟರ್ ಇಲ್ಲ, ಲೇಖನ ಸಾಮಗ್ರಿಗಳಿಲ್ಲವಂತೆ

★

ತಿಂಡಿ ಬೆಲೆ ತಗ್ಗಿತು

ಮಂಡ್ಯ— ಹೋಟಲಿನವರು ಎಲ್ಲ ತಿಂಡಿ ಪದಾರ್ಥಗಳ ಬೆಲೆಯನ್ನು 5 ಪೈಸೆ; ಚಹಾದ ಬೆಲೆ 10 ಪೈಸೆ ಕಡಮೆಮಾಡಲು ನಿರ್ಧರಿಸಿರುವರು.

★

ಶಾಸನ ಸಭೆ

ಬೆಂಗಳೂರು– ರಾಜ್ಯದ ಶಾಸನಸಭೆಗಳ ಬಡ್ಜೆಟ್ ಅಧಿವೇಶನವು ಫೆಬ್ರವರಿ 10 ರಂದು ಪ್ರಾರಂಭವಾಗಲಿರುವದೆನ್ನಲಾಗಿದೆ.

○

1400 ವರ್ಷಗಳ ಹಿಂದಿನ ಉಂಗುರ

ಜರೂಸೆಲಂ– ಏಸುಕ್ರಿಸ್ತನನ್ನು ಸಮಾಧಿ ಮಾಡಲಾಗಿರುವದೆಂದು ಹೇಳಲಾದ. (ಗೋಡೆ ಹಾಕಲ್ಪಟ್ಟಿರುವ ಹಳೇ ಜರೂಸೆಲಂ ನಗರದಲ್ಲಿ (ಸ್ಥಳದಲ್ಲಿ ಇಸ್ರೇಲಿ ಭೂಗರ್ಭ ಶೋಧಕರು 1400 ವರ್ಷಗಳ ಹಿಂದಿನ ಉಂಗುರವನ್ನು ಪತ್ತೆಮಾಡಿದ್ದಾರೆ.

★

ಕಾಂಗ್ರೆಸ್ಸಿಗೆ ಹೆಚ್ಚು ಸ್ಥಾನ

ಮಡಕೇರಿ— ಇಲ್ಲಿಯ ಪುರಸಭಾ ಚುನಾವಣೆಯಲ್ಲಿ 15 ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ 9 ಸಿಕ್ಕಿತು.

ಅಧ್ಯಕ್ಷರಲ್ಲಿ ವಿನಂತಿ

ನವದೆಹಲಿ— ಪ್ರಧಾನಿಯರು ಲೋಕಸಭೆ ವಿಸರ್ಜಿಸಿ, ಫಟ್ಟನೆ ಚುನಾವಣೆ ನಡೆಸಲು ಇಚ್ಛಿಸಿದಲ್ಲಿ ಅದಕ್ಕೆ ಅನುಮತಿ ನೀಡಬಾರದೆಂದು ಭಾರತಾಧ್ಯಕ್ಷ ಶ್ರೀ ಅಹಮ್ಮದ್‌ರವರಲ್ಲಿ ಮಾರಕ್ಸಿಸ್ಟ್ ನಾಯಕ ಶ್ರೀ ಜ್ಯೋತಿರ್ಮಯಿ ಬಸು ವಿನಂತಿಸಿದ್ದಾರೆ.

★

ಕ್ರೀಡೆಗಳಿಗೆ ಲಾಟರಿ ಹಣ

ಮಾಂಟ್ರಿಲ್– ಇಲ್ಲಿ 1976 ರಲ್ಲಿ ನಡೆಸಲಾಗುವ ಒಲಿಂಪಿಕ್ ಕ್ರೀಡೆಗಳಿಗೆ ಹಣಕ್ಕಾಗಿ ನಡೆಸಲಾಗುತ್ತಿರುವ ಲಾಟರಿಯಲ್ಲಿನ 8 ಡ್ರಾಗಳ ಪೈಕಿ ಇನ್ನು 3 ಬಾಕಿ ಇದ್ದು, ಈಗಾಗಲೆ ಕ್ರೀಡೆಗಳಿಗಾಗಿ 52 1 ಮಿಲಿಯ ಕೊಡಲಾಗಿದೆ

★

ರೆಪ್ಪು ತೆರಿಗೆ ರೂ 500 ಕಮ್ಮಿ

ನವದೆಹಲಿ– ಸೆಣಬಿನ ಕಾರ್ಪೆಟ್‌ಗಳ ರೆಪ್ಪು ತೆರಿಗೆಯನ್ನು ರೂ 650 ಮತ್ತು 750 ನ್ನು ಒಂದೇ ರೀತಿ ರೂ. 200 ಕ್ಕೆ ಇಳಿಸಲಾಗಿದೆ

★

ಭ್ರಷ್ಟಾಚಾರ

ಬೆಂಗಳೂರು– ಭ್ರಷ್ಟಾಚಾರವನ್ನು ಉಪೇಕ್ಷಿಸಲಾಗುತ್ತಿದೆ ಎಂದು ಪ್ರಧಾನಿಯವರು ಹೇಳಿರುವುದರಿಂದ ಅವರಿಗೆ ಭ್ರಷ್ಟಾಚಾರ ಎಷ್ಟರಮಟ್ಟಿಗಿದೆ ಎಂಬ ಬಗ್ಗೆ ಪೂರ್ಣ ತಿಳುವಳಿಕೆ ಇದೆ ಎಂಬುದು ಸ್ಪಷ್ಟವಾಗಿದೆ ಎಂದು ಕಮ್ಯೂನಿಸ್ಟ್ ಪಾರ್ಟಿ ನಾಯಕ ಶ್ರೀ ರಾಮಮೂರ್ತಿ ಟೀಕಿಸಿದರು

●

ರಾಜಸ್ಥಾನದಲ್ಲಿ

ಜಯಪುರ — ರಾಜಸ್ಥಾನದಲ್ಲಿಯ 10 ಜಿಲ್ಲೆಗಳಲ್ಲಿಯ 9167 ಗ್ರಾಮಗಳ ಪೈಕಿ 7487 ಗ್ರಾಮಗಳಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಸರಕಾರ ಘೋಷಿಸಿದೆ

(2)

ಪತ್ರಿಕಾ

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ, ಕಬಿನಿ ಕಾಲುವೆ ಶನಿಜೆ ವಿಭಾಗ, ನಂಜನಗೂಡು. ತಾ. ಡಿಸೆಂಬರ್ 1974

ಸಂಕ್ಷಿಪ್ತ ಟೆಂಡರ್ ಪ್ರಕಟಣೆ ನಂ. 11/74-75 ತಾ. 9-12-1974

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಸೂಕ್ತ ವರ್ಗದ ಕಂಟ್ರಾಕ್ಟರ್‌ಗಳಿಂದ, ಟೆಂಡರ್ ಪಾರಂ ದಿಂದ ಸರಿಯಾಗಿ ಸಹಿ ಮಾಡಲ್ಪಟ್ಟ ಕೆಲಸದ ಹೆಸರು ಬರೆದ ಪ್ರತ್ಯೇಕ ಮೊಹರಾದ ಶೇಕಡಾವಾರು ಮತ್ತು ಏಟಿಂವಾರು ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಆಹ್ವಾನಿಸ ಲಾಗಿದೆ ಮತ್ತು ನಂಜನಗೂಡಿನಲ್ಲಿರುವ, ಕಬಿನಿ ಪ್ರಾಜೆಕ್ಟ್ ಕಾಪೋನಿಯ, ಕಬಿನಿ ಶನಿಜೆ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಟೆಂಡರ್‌ಗಳನ್ನು 10-1-1975 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಮುಂದೆ ಅದೇ ದಿನ ಅಂದರೆ 10-1-1975 ಅಥವಾ ಇನ್ನಾವುದಾದರೂ ಅನುಕೂಲವಾದ ದಿನ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಟೆಂಡರ್‌ಗಳು ಒಡೆಯಲ್ಪಡುವುವು. ಟೆಂಡರ್ ಫಾರಂಗಳಿಗೆ ವಿಧಾಯಕ ವಾದ ಶುಲ್ಕದೊಡನೆ ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅರ್ಜಿಗಳನ್ನು 6-1-1975 ರಂದು ಸ್ವೀಕರಿಸಲಾಗುವುದು ಅರ್ಜಿ ಪಲ್ಲಟದ ಟೆಂಡರ್‌ದಾರರಿಗೆ ಕಚೇರಿ ಕೆಲಸದ ವೇಳೆಗಳಲ್ಲಿ ವಿಭಾಗ ಕಚೇರಿಯಲ್ಲಿ 9-1-1975 ರಂದು ದ್ವಿಪ್ರತಿಗಳಲ್ಲಿ ವಿಧಾಯಕ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಟೆಂಡರ್ ಫಾರಂಗಳ ದರವನ್ನು ವಾಪಸು ಮಾಡುವುದಿಲ್ಲ ಅಥವಾ ವರ್ಗಾವಣೆ ಮಾಡುವುದಿಲ್ಲ (ಪ್ರತಿ ಕೆಲಸಕ್ಕೆ ಇ ಎಂ ಡಿ ಯನ್ನು ಪ್ರತ್ಯೇಕವಾಗಿ ಕೊಡಬೇಕು).

ಟೆಂಡರ್‌ನ್ನು ಒಪ್ಪಿಕೊಳ್ಳಲು ತಕ್ಕ ಅಧಿಕಾರವುಳ್ಳ ಅಧಿಕಾರಿಯನಿರಿಗೆ, ಯಾವುದೇ ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕು ಮೀಸಲಾಗಿದೆ ಪರತ್ತುಗಳುಳ್ಳ ಟೆಂಡರ್ ಅಂಗೀಕಾರ ಅರ್ಹವಲ್ಲ. ಕಚೇರಿ ಕೆಲಸದ ವೇಳೆಗಳಲ್ಲಿ ಕೆಲಸದ ಎಲ್ಲಾ ದಿನಗಳಲ್ಲಿ ವಿಭಾಗ ಕಚೇರಿ ಯಿಂದ ಹೆಚ್ಚು ವಿವರಗಳು ಬೇಕಾಗಿದ್ದಲ್ಲಿ ಪಡೆಯಬಹುದು.

ಸೀ ನಂ	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟಿರುವ ಕೆಲಸದ ಅಂದಾಜು ಮೊತ್ತ ರೂ	ಇ ಎಂ ಡಿ ಶೇಕಡ 2½ಯಂತೆ ರೂ	ಟೆಂಡರ್ ಫಾರಂ ಗಳ ದರ ರೂ	ಮುಗಿಸಲು ಕಾಲಾವಧಿ (ಮಳೆಗಾಲ ಬಿಟ್ಟು)	ಅರ್ಹ ಕಂಟ್ರಾಕ್ಟರ್ ವರ್ಗ	ಕಾಲ್ ನಂ
	ಜೈನೇಜ್‌ನಲ್ಲಿ ಕಬಿನಿ ಬಲದಂಡೆ ಕಾಲುವೆಯಲ್ಲಿ ಉಳಿಕೆ ಭೂಮಿ ಕೆಲಸದ ಅಗೆತ						
1	92643-97881 (ಜಿಲರ್ 30-36/58 ಎಂ)	5,78 000	11,560 ಶೇಕಡ 2	50 ಪ್ಲಸ್ ಶೇಕಡ 3 ಮಾರಾಟ ತೆರಿಗೆ	12 ತಿಂಗಳು	2 ಮತ್ತು ಮೇಲ್ಪಟ್ಟ	1
2.	92269-92541 (ಜಿಲರ್ 19-26/58 ಎಂ)	4,75,000	11,875	20 ಪ್ಲಸ್ ಶೇಕಡ 3 ಮಾರಾಟ ತೆರಿಗೆ	10 ತಿಂಗಳು	ಡಿಟೋ	1
3.	72925-73090 (ಜಿಲರ್ (17-21/46 ಎಂ)	2,45,960	6,124	ಡಿಟೋ	ಡಿಟೋ	ಡಿಟೋ	3
4	69057-69156 (ಜಿಲರ್ (45-47/43 ಎಂ)	3 21.000	8,003	ಡಿಟೋ	ಡಿಟೋ	ಡಿಟೋ	1
5.	68,859-68892 (ಜಿಲರ್ 39/43 ಎಂ)	75.393	1.885	10 ಪ್ಲಸ್ ಶೇಕಡ 3 ಮಾರಾಟ ತೆರಿಗೆ	8 ತಿಂಗಳು	3 ಮತ್ತು ಮೇಲ್ಪಟ್ಟ	1
6	96553-96825 (ಜಿಲರ್ 19-21/61 ಎಂ)	80,000	2,000	ಡಿಟೋ	ಡಿಟೋ	ಡಿಟೋ	2
7	90025-90059 (ಜಿಲರ್ 1/57 ಎಂ)	22,000	550	ಡಿಟೋ	4 ತಿಂಗಳು	4 ಮತ್ತು ಮೇಲ್ಪಟ್ಟ	2
8.	97165-97267 (ಜಿಲರ್ 37-39/61 ಎಂ)	13,300	333	ಡಿಟೋ	ಡಿಟೋ	ಡಿಟೋ	2
9	97709-97913 (ಜಿಲರ್ 5-10/60 ಎಂ)	31,300	783	ಡಿಟೋ	ಡಿಟೋ	3 ಮತ್ತು ಮೇಲ್ಪಟ್ಟ	2
10.	97913-98049 (ಜಿಲರ್ (11-14/62 ಎಂ)	15,900	398	ಡಿಟೋ	ಡಿಟೋ	4 ಮತ್ತು ಮೇಲ್ಪಟ್ಟ	1

ಸೂಚನೆ :— ಏಟಂ 1 ಕ್ಕೆ ಏಟಂ – ದರದ ಟೆಂಡರ್‌ಗಳನ್ನು ಕೊಡಬೇಕು. ಏಟಂ 2 ರಿಂದ 10 ರ ತನಕ ಶೇಕಡಾವಾರು ಟೆಂಡರ್‌ಗಳನ್ನು ಕೊಡಬೇಕು.

ಸಹಿ/– ಎಸ್. ನಾಗೇಂದ್ರಪ್ಪ, ಎಕ್ಸಿಕ್ಯುಟೀವ್ ಇಂಜಿನಿಯರ್.

ಅಬ್ದುಲ್ಲರ ತರ್ಜಿಟ

ಶ್ರೀನಗರ— ಭಾರತ ಚೌಕಟ್ಟಿನಲ್ಲಿ ಕಾಶ್ಮೀರವೂ ಸೇರಿ ಎಲ್ಲಾ ರಾಜ್ಯಗಳಿಗೂ ಹೆಚ್ಚು ಸ್ವಾತಂತ್ರ್ಯ ನೀಡಿ ಷೇಕ್ ಅಬ್ದುಲ್ಲರು ಒತ್ತಾಯ ಮಾಡಿರುವರು.

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore

ವುಡ್‌ಲಾಂಡ್ 3 ನೇ ವಾರ
ಚೆಟಕಾರಿ
ಟರ್
ಅಪೆರಾ 27 12 74 ರಿಂದ
ಅತ್ಯಯಾ ಮಾವಿಯಾ